ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

1. ತಾಲ್ಲೂಕಿಗೊಂದು ಕ್ರೀಡಾಂಗಣದಂತೆ ಹಾಸನ ಜಿಲ್ಲೆಯಲ್ಲಿ, ಹಾಸನ, ಸಕಲೇಶಪುರ ಅರಸೀಕೆರೆ, ಹೊಳೇನರಸೀಪುರ, ಚನ್ನರಾಯಪಟ್ಟಣ ಹಾಗೂ ಬೇಲೂರು ತಾಲ್ಲೂಕುಗಳಿಗೆ ಕ್ರೀಡಾಂಗಣ ಮಂಜೂರಾಗಿದೆ.

2. ಜಿಲ್ಲಾ ಕೇಂದ್ರವಾದ ಹಾಸನದಲ್ಲಿ ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ ಹಾಗೂ ಅರಸೀಕೆರೆ ಸಕಲೇಶಪುರ, ಹೊಳೇನರಸೀಪುರ ಹಾಗೂ ಚನ್ನರಾಯಪಟ್ಟಣಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳ ಕಾಮಗಾರಿ ಪ್ರಾರಂಭವಾಗಿದ್ದು ಅವುಗಳ ಪ್ರಗತಿಯ ಹಂತ ಈ ಕೆಳಕಂಡಂತಿದೆ.

ಸಕಲೇಶಪುರ : ಪೆವಿಲಿಯನ್ ಕಟ್ಟಡದ ಕೆಲಸ ಹಾಗೂ ನೆಲಹಾಸು ಮೈದಾನದ ಸಮತಟ್ಟು ಕೆಲಸ ಭಾಗಶಃ ಪೂರ್ಣಗೊಂಡಿದೆ. ಪೆವಿಲಿಯನ್ ಕಟ್ಟಡ ಮುಕ್ತಾಯ ಹಂತದಲ್ಲಿದೆ ಕಾಂಪೌಂಡ್ ಕೆಲಸ ಪ್ರಗತಿಯಲ್ಲಿದೆ.

ಅರಸೀಕೆರೆ : ಕ್ರೀಡಾಂಗಣದ ಮೈದಾನವನ್ನು ನೆಲಸಮತಟ್ಟು ಮಾಡುವ ಕೆಲಸ, ಕಾಂಪೌಂಡ್ ಗೋಡೆ ಕೆಲಸ ಸ್ವಲ್ಪ ಭಾಗ ಮುಗಿದಿದ್ದು, ಪೆವಿಲಿಯನ್ ಕಟ್ಟಡ ಪ್ರಗತಿಯಲ್ಲಿದೆ.

ಹೊಳೇನರಸೀಪುರ : ಕ್ರೀಡಾಂಗಣದ ಮೈದಾನದ ಸುತ್ತ ಬೇಲಿ ಹಾಕುವ ಕೆಲಸ ಹಾಗೂ ನೆಲಸಮತಟ್ಟು ಮಾಡುವ ಕೆಲಸ ಭಾಗಶಃ ಮುಗಿದಿದೆ. ಪೆವಿಲಿಯನ್ ಕಟ್ಟಡ ಲಿಂಟಲ್‌ರವರೆಗೆ ಬಂದಿದೆ.

ಚನ್ನರಾಯಪಟ್ಟಣ : ನೆಲಸಮತಟ್ಟು ಮಾಡಲಾಗುತ್ತಿದೆ. ಕಾಮಗಾರಿಯು ಪ್ರಗತಿಯಲ್ಲಿದೆ.

ಬೇಲೂರು : ಒಂದು ಎಕರೆ ನಿವೇಶನದ ಬಗ್ಗೆ ತಕರಾರು ಇರುವುದರಿಂದ ನಿರ್ಮಾಣ ಕಾರ್ಯ ಸ್ಥಗಿತಗೊಂಡಿದೆ.

ರಾಜ್ಯದ ಲೋಕೋಪಯೋಗಿ ರಸ್ತೆಗಳ ಕುರಿತು

2046 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಕಿಮೀ. ಲೋಕೋಪಯೋಗಿ ರಸ್ತೆಗಳಿವೆ?

ಆ) ಎಷ್ಟು ಕಿಮೀ. ರಾಷ್ಟ್ರೀಯ ಹೆದ್ದಾರಿಗಳಿವೆ?

ಇ) ಹೊಸದಾಗಿ ಎಷ್ಟು ರಾಷ್ಟ್ರೀಯ ಹೆದ್ದಾರಿಗಳಿಗೆ ಅನುಮತಿ ದೊರಕಿದೆ?

ಈ) ನಂಜನಗೂಡಿನಿಂದ ಚಾಮರಾಜನಗರ ಮಾರ್ಗ ಪುಣಜನೂರಿನವರೆಗೆ ಹದಗೆಟ್ಟಿರುವ ರಸ್ತೆಯನ್ನು ರಿಪೇರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 39,706 ಕಿಮೀ. ಉದ್ದ ರಸ್ತೆಗಳಿವೆ. ಇವುಗಳಲ್ಲಿ ರಾಜ್ಯ ಹೆದ್ದಾರಿಯ ಉದ್ದ - 11,395 ಕಿಮೀ, ಜಿಲ್ಲಾ ಮುಖ್ಯ ರಸ್ತೆಯ ಉದ್ದ 28,311 ಕಿಮೀ.

ಆ) ಒಟ್ಟಾರೆ 1997 ಕಿಮೀ. ಉದ್ದದ ಏಳು ರಾಷ್ಟ್ರೀಯ ಹೆದ್ದಾರಿಗಳು ಇವೆ.

ಇ) ರಾಜ್ಯದಲ್ಲಿ 1972 ರಿಂದಲೂ ಯಾವುದೇ ರಾಷ್ಟ್ರೀಯ ಹೆದ್ದಾರಿಯನ್ನು ಹೊಸದಾಗಿ ಕೇಂದ್ರ ಸರ್ಕಾರ ಘೋಷಿಸಿರುವುದಿಲ್ಲ.

ಈ) 1996-97ರ ಸಾಲಿನಲ್ಲಿ ಕೆಲವು ಭಾಗಗಳನ್ನು ಅಭಿವೃದ್ಧಿಪಡಿಸಲು 70.80 ಲಕ್ಷ ರೂ.ಗಳ ಮೊತ್ತ ಅಂದಾಜಿಸಿದ್ದು, ಕೆಲಸಗಳು ಪ್ರಗತಿಯಲ್ಲಿವೆ. 1997-98ರ ಸಾಲಿನಲ್ಲಿಯೂ ಸಹ 95.00 ಲಕ್ಷ ರೂ.ಗಳಷ್ಟು ಅಂದಾಜು ಮೊತ್ತದ ಕಾಮಗಾರಿಗಳನ್ನು ಪ್ರಸ್ತಾವಿಸಿದೆ. ಇದಲ್ಲದೇ ಕೇಂದ್ರದಿಂದ ಆರ್ಥಿಕ ಪ್ರಾಮುಖ್ಯತೆ ಸಾಲ ನೆರವಿನಡಿಯಲ್ಲಿ ಸುಮಾರು 44 ಕಿಮೀ.ರಸ್ತೆ ಅಭಿವೃದ್ಧಿಗೆ ಒಪ್ಪಿಗೆ ದೊರೆತಿದ್ದು, ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಇಲ್ಲಿಯ ತನಕ ನಬಾರ್ಡ್ ಯೋಜನೆಯಿಂದ ಬಿಡುಗಡೆಯಾದ ಹಣ

2048 - ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇಲ್ಲಿಯ ತನಕ ನಬಾರ್ಡ್ ಯೋಜನೆಯಿಂದ ಒಟ್ಟು ಬಿಡುಗಡೆಯಾದ ಹಣವೆಷ್ಟು?

ಆ) ಈ ಯೋಜನೆ ಅಡಿಯಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಕಾಮಗಾರಿ ಮಂಜೂರಾಗಿದೆ. (ತಾಲ್ಲೂಕುವಾರು ವಿವರ ನೀಡುವುದು)

ಇ) ನಬಾರ್ಡ್ ಯೋಜನೆಯಲ್ಲಿ ಕಾಮಗಾರಿ ಮಂಜೂರಾತಿ ನೀಡಲು ಸರ್ಕಾರ ಮಾರ್ಗಸೂಚಿ ಏನಾದರೂ ಸೂಚಿಸಿದೆಯೇ?

ಈ) ಈ ಕಾಮಗಾರಿ ಪಟ್ಟಿಯನ್ನು ಯಾರು ಸೂಚಿಸಬೇಕು?

ಉ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಸಿರ್ಸಿ, ಯಲ್ಲಾಪುರ ತಾಲ್ಲೂಕುಗಳು, ಹಿಂದುಳಿದ ಗುಡ್ಡಗಾಡು ಪ್ರದೇಶಗಳೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಬಂದಿದ್ದಲ್ಲಿ ಇದನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈವರೆಗೆ ನಬಾರ್ಡ್‌ನಿಂದ ಹಣ ಬಿಡುಗಡೆಯಾಗಿರುವುದಿಲ್ಲ.